Shortage of Buses in M.S.R.T.C. Depot at Hirekerur

52. **Sri B. G. BANAKAR** (Hirekerur).—

Will the Minister for Labour be pleased to state:—

the steps taken to remove the shortage of buses, cancellation of schedules and overloading of passengers in Hirekerur Mysore State Road Transport Corporation Depot.

Sri N. CHIKKEGOWDA (Minister of State for Animal Husbandry) [On behalf of AZEEZ SAIT (Minister for Labour)].—

There is no shortage of vehicles in Hirekerur Depot for normal operation.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ, ಹೀರೆಕೆರೂರು ಕೇಂದ್ರದಲ್ಲಿ ಓಡಾಡುತ್ತಿರುವ ಲವು ಬಸ್ಸುಗಳಲ್ಲಿ ಓವರ್‌ಲೋಡ್ ಹಾಕಿದ್ದು ತಮಗೆ ಗೊತ್ತಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಹಿರೇಕೆರೂರು ಕೇಂದ್ರದಲ್ಲಿ ಎಲ್ಲಮ್ಮನ ಜಾತ್ರೆ, ಗೋಕರ್ಣ ಜಾತ್ರೆ ಮತ್ತು ಮಹಾ ಚುನಾವಣೆಯ ಕಾಲದಲ್ಲಿ ಎಂದರೆ ಜನವರಿ, ಫೆಬ್ರವರಿ, ಮಾರ್ಚ್ ಈ ತಿಂಗಳುಗಳಲ್ಲಿ ಕೆಲವು ಬಸ್‌ರೂಟ್‌ಗಳಲ್ಲಿ ಓವರ್‌ಲೋಡ್ ಆಗಿರತಕ್ಕದ್ದು ನಿಜ.

ಶ್ರೀ ಬಿ. ಜಿ. ಬಣಕಾರ್.—ಅನೇಕಸಾರಿ ಆಗಿಂದಾಗ್ಗೆ ಕೆಲವು ರೂಟುಗಳಲ್ಲಿ ಬಸ್ಸುಗಳನ್ನು ಕ್ಯಾನ್ಸಲ್ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ನಾನು ಈಗಾಗಲೇ ಹೇಳಿದಹಾಗೆ, ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಎಲ್ಲಮ್ಮನ ಜಾತ್ರೆ ಮತ್ತು ಗೋಕರ್ಣದ ಜಾತ್ರೆ ಹಾಗೂ ಮಹಾ ಚುನಾವಣೆಯ ಪ್ರಯುಕ್ತ ಅಲ್ಲಗೆ ಕೆಲವು ಸ್ಪೆಷರ್ ಬಸ್ಸುಗಳನ್ನು ಹಾಕಬೇಕಾದ್ದರಿಂದ ಕೆಲವು ರೂಟು ಗಳನ್ನು ಕ್ಯಾನ್ಸರ್ ಮಾಡಿದ್ದು ಉಂಟು.

ಶ್ರೀ ಆರ್. ಎಸ್. ಪಾಟೀಲ್.—ಸ್ವಾಮಿ ಈ ಪ್ರಶ್ನೆಯಲ್ಲಿ ಮೈಸೂರು ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ಹೀರೆಕೆರೂರು ಕೇಂದ್ರದಲ್ಲಿ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ವೇಳಾಪಟ್ಟಿಗನುಗುಣವಾಗಿ ಬಸ್ಸುಗಳನ್ನು ಓಡಿಸದೆ ಇರುವಂತಹ ಸಂದರ್ಭಗಳಲ್ಲಿ ಹಾಗೂ ಬಸ್ಸಿ ನಲ್ಲಿ ಜನದಟ್ಟಣೆಯನ್ನು ತಡೆಯುವಲ್ಲಿ ಸರ್ಕಾರದವರು ಕೈಕೊಂಡಿರುವ ಕ್ರಮಗಳೇನು ಎಂದು ಕೇಳಿದ್ದಕ್ಕೆ ಕ್ರಮಬದ್ಧವಾಗಿ ಬಸ್ಸುಗಳನ್ನು ಓಡಿಸಲು ಹೀರೆಕೆರೂರು ಕೇಂದ್ರದಲ್ಲಿ ಬಸ್ಸುಗಳ ಕೊರತೆ ಇರುವುದಿಲ್ಲ ಎಂದು ಹೇಳಿದ್ದೀರಿ ಆದರೆ ಈ ಪ್ರಶ್ನೆಗೆ ಸರಿಯಾದ ಉತ್ತರ ಬರಲಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಈಗ ಅಲ್ಲಿ ಬಸ್ಸುಗಳ ಷಾರ್ಟೇಜ್ ಇಲ್ಲ ಎಂದು ಹೇಳಿದೆ. ಎರಡ ನೆಯದಾಗಿ ಆ ಭಾಗದಲ್ಲಿ ಓವರ್ ಲೋಡ್ ಆಗಿರತಕ್ಕದ್ದು ನಿಜ, ಏತಕ್ಕೆಂದರೆ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಕೆಲವು ಜಾತ್ರೆಗಳಿಗೆ ಮತ್ತು ಮಹಾಚುನಾವಣೆಯ ಸಂದರ್ಭದಲ್ಲಿ ಅಲ್ಲಿಗೆ ಕೆಲವು ಸ್ಪೆಷರ್ ಬಸ್ಸುಗಳನ್ನು ಹಾಕಬೇಕಾದ್ದರಿಂದ ಕೆಲವು ರೂಟುಗಳಲ್ಲಿ ಬಸ್‌ಗಳನ್ನು ಕ್ಯಾನ್ಸರ್ ಮಾಡಬೇಕಾಗಿತ್ತು. ಆ ಕೆಲಸಗಳು ಮುಗಿದ ನಂತರ ಆ ರೂಟುಗಳಲ್ಲಿ ಮೊದಲನಂತೆ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಈ ಭಾಗದಲ್ಲಿರತಕ್ಕ ಕೆಲವು ಹಳೆಯ ಬಸ್ಸುಗಳನ್ನು ತೆಗೆದು ಅಲ್ಲಿಗೆ ಹೊಸ ಬಸ್ಸುಗಳನ್ನು ಹಾಕುವ ಬಗ್ಗೆ ಕ್ರಮತೆಗೆದುಕೊಂಡಿದ್ದೇವೆ.

ಶ್ರೀ ಬಿ. ಜಿ. ಬಣಕಾರ್.—ಹಿರೇಕೆರೂರು ಕೇಂದ್ರಕ್ಕೆ ಜಾತ್ರೆ ಮುಂತಾದ ವಿಶೇಷ ಸಂದರ್ಭ ದಲ್ಲಿ ಬಸ್ಸುಗಳನ್ನು ಒದಗಿಸಲು ಅನುಕೂಲವಾಗಲು ಮತ್ತು ಕೆಲವು ರೂಟುಗಳಿಗೆ ಹೆಚ್ಚಿನ ಬಸ್ಸು

ಗಳನ್ನು ಹಾಕಲು ಅನುಕೂಲವಾಗುವಂತೆ ಅಲ್ಲಿಗೆ ಹೆಚ್ಚಿನ ಬಸ್ಸುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗಾಡ.—ಅಲ್ಲಿಗೆ ಹೆಚ್ಚಿಗೆ ಬಸ್ಸುಗಳನ್ನು ಕೊಡುವುದು ಕಷ್ಟವಾಗಿದೆ. ಏತಕ್ಕೆಂದರೆ ಈಗ ಹೊಸ ಬಸ್ಸುಗಳನ್ನು ಪಡೆಯುವುದು ಕಷ್ಟವಾಗಿದೆ. ಚಾಸಿಗಳು ಸಿಕ್ಕುವುದಿಲ್ಲ ಕೆಲವು ರೂಟುಗಳಲ್ಲಿ ಹೆಚ್ಚು ಬಸ್ಸುಗಳನ್ನು ಓಡಿಸಬೇಕೆಂದು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿನವರು ತೀರ್ಮಾನ ಮಾಡಿದರೂ ಕೂಡ ಚಾಸಿಗಳು ಸಿಕ್ಕುತ್ತಿಲ್ಲ. ಒಂದು ವೇಳೆ ಆ ರೂಟುಗಳಲ್ಲಿ ಹೆಚ್ಚು ಜನ ಬಸ್ಸಿನಲ್ಲಿ ಓಡಾಡುವುದಕ್ಕೆ ಇರುತ್ತಾರೆ ಎಂದು ಹೇಳುವುದಾದರೆ ಹೊಸ ಬಸ್ಸುಗಳು ಬಂದಾಗ ಅಲ್ಲಿಗೆ ಬಸ್ಸುಗಳನ್ನು ಹಾಕುವುದಕ್ಕೆ ಏರ್ಪಾಟು ಮಾಡುತ್ತೇವೆ.

Drinking Water Facilities in Villages of Mudigere Constituency

55. **Sri G. PUTTASWAMY** (Mudigere).—

Will the Minister for Community Development and Social Welfare be pleased to state :—

(*a*) the villages of Mudigere Constituency where there is no facility of drinking water ;

(*b*) the villages of this constituency where drinking water supply was not found possible by digging wells, and the action taken by them to provide drinking water facilities to these villages ;

(*c*) the number of villages of this Constituency which are included in the National Rural Water Supply Scheme and the villages which are yet to be included ?

Sri M. MALLIKARJUNASWAMY (Minister for Community Development and Social Welfare).—

(*a*) *Vide* list appended.

(*b*) Due to paucity of water in the wells, suitable action has been taken to dig new wells in the following villages :—

Jakkali,

Balur,

Aldoor Hosahalli.

(*c*) (i) Five.

(ii) Seven.